

ಶಾಲೆ, ಶಿಕ್ಷಣಗಳಿಲ್ಲದ್ದಕ್ಕೆ, ಮನೆ-ಮಾತುಗಳನ್ನುಳಿದರೆ ಕನ್ನಡದ ಸೊಲ್ಲು ಕೇಳಬರುತ್ತಿರಲಿಲ್ಲ". ರಸೆಲ್ಲರು ತಮ್ಮ ಮೇಲಧಿಕಾರಿಗಳಿಗೆ ಈ ಭಾಗದ ಜನರ ಮಾತೃಭಾಷೆ, ಆ ಭಾಷೆ ಮತ್ತು ಜನರ ಇತಿಹಾಸದ ಹಿರಿಮೆ-ಗರಿಮೆಯನ್ನು ಉಲ್ಲೇಖಿಸಿ ಬರೆದ ಪತ್ರ, ಅವರ ಕಳಕಳಿ ಬಹಳ ಮಹತ್ವದವು: "ತಮ್ಮ ತಮ್ಮ ಪ್ರಾದೇಶಿಕ ಭಾಗಗಳಲ್ಲಿ ಮರಾಠಿ ಹಾಗೂ ಗುಜರಾತಿ ಭಾಷೆಗಳಿಗೆ (ಶಿಕ್ಷಣ ಹಾಗೂ ವ್ಯವಹಾರಗಳಲ್ಲಿ) ಯಾವ ಸ್ಥಾನವಿದೆಯೋ ಅದೇ ಸ್ಥಾನ ಈ ವಿಭಾಗದಲ್ಲಿ ಕನ್ನಡ ಭಾಷೆಗೆ ಸಿಗಬೇಕು" ಎನ್ನುವುದು ರಸೆಲ್ಲರ ಪತ್ರದ ತಾತ್ಪರ್ಯ.

ರಸೆಲ್ಲರು ಇನ್ನೂ ಹೆಚ್ಚು ಮಹತ್ವದವರು ಏಕಾಗುತ್ತಾರೆಂದರೆ, ಅವರು ಅದೇ ತಾನೆ ಮುಂಬೈ ವಿಶ್ವವಿದ್ಯಾಲಯದ ಎಂ.ಎ. ಮುಗಿಸಿ ಬಂದ ರಾ.ಹ. ದೇಶಪಾಂಡೆಯವರಿಗೆ ಮನದಟ್ಟಾಗುವಂತೆ ತಿಳಿಸಿ ಹೇಳಿ ಅವರನ್ನು ಕನ್ನಡದ ಕೈಂಕರ್ಯಕ್ಕಾಗಿ ಸಿದ್ಧಗೊಳಿಸುತ್ತಾರೆ. ಮುಂದಿನ ಐವತ್ತು ವರ್ಷಗಳಷ್ಟು ಕಾಲ ರಾ.ಹ. ದೇಶಪಾಂಡೆ ಮಾಡಿದ ಕಾರ್ಯದಿಂದಾಗಿ ಅವರು ಕನ್ನಡದ 'ಕಾರಣಪುರುಷ'ರಾಗುತ್ತಾರೆ. 'ಕರ್ನಾಟಕ ವಿದ್ಯಾವರ್ಧಕ ಸಂಘ' ಅಸ್ತಿತ್ವಕ್ಕೆ ಬರುತ್ತದೆ. ದಯವಿಟ್ಟು ನೆನಪಿಡಿ: ಕ.ವಿ.ವ. ಸಂಘದ ಸ್ಥಾಪನೆಯ ಹಿಂದೆ ಎರಡು ಮಹತ್ವದ ಉದ್ದೇಶಗಳಿದ್ದವು: ಒಂದು, ಕನ್ನಡದಲ್ಲಿ ಸಮರ್ಥ ಗದ್ಯ ಕಟ್ಟಿ ಬಳಕೆಯಲ್ಲಿ ತರುವುದು ಹಾಗೂ ಓದಬಲ್ಲ ಸಾಹಿತ್ಯ ನಿರ್ಮಿಸುವುದು. ಎರಡು, ಕನ್ನಡ ನಾಡಿನ ಇತಿಹಾಸವನ್ನು ಕಟ್ಟಿಕೊಡುವುದು. ಈ ಇತಿಹಾಸ ಕಟ್ಟಿಕೊಡುವ ಕೆಲಸ ಮಾಡಿದವರಲ್ಲಿ